ಮಂಗನ ಅಧಿಕ ಪ್ರಸಂಗ



✍️ ಕೌಡೂರು ನಾರಾಯಣ ಶೆಟ್ಟಿ, ಇಟೆಲಿ

ಒಂದು ಸೀಳಿದ ಮರದ ಮಧ್ಯೆ ದೊಡ್ಡ ಕೀಲನ್ನು ಹೊಡೆದು ಇಡಲಾಗಿತ್ತು. ಈ ಮರ ಕೋಯ್ಯುವವರುಹಲಗೆಯನ್ನು ಅರ್ಧದವರೆಗೆಸೀಳಿ, ಕೀಲು ಸಿಕ್ಕಿಸಿ ಹೋಗಿದ್ದರು. ಮರ ಕೋಯ್ಯುವಾಗ ಸೀಳು ಆ ಕಡೆಯಿಂದ ಈ ಕಡೆಗೆ ಒಂದಾಗದಂತೆ, ಗರಗಸ ಸಿಕ್ಕಿಹಾಕಿಕೊಳ್ಳದಂತೆ ಮರ ಕೋಯ್ಯುವವರು ಕೀಲನ್ನು ಹೊಡೆಯುತ್ತಾಮುನ್ನಡೆಯುತ್ತಾರೆ.
ಆಗ ಒಂದು ಗುಂಪು ಕೋತಿಗಳು ಬಂದವು. ಅಲ್ಲಿ ಹಾರುತ್ತ, ಇಲ್ಲಿ ಜಿಗಿಯುತ್ತ "ಟೆರೆಂಕ್ ಟೆರೆಂಕ್" ಎಂದು ಶಬ್ದ ಮಾಡುತ್ತಿದ್ದವು. ಈ ಕೋತಿಗಳ ವಿಚಾರ ಏನು ಹೇಳುವುದು ಈ ನಾಟಕಗಳಲ್ಲಿ ಕೋಡಂಗಿ ವೇಷ ಬರುತ್ತದಲ್ಲವೇ, ಅದು ಈ ಕೋತಿಯಿಂದಲೇಬಂದದ್ದು! 'ಕಪಿ ಚೇಷ್ಟೆ' ಎಂಬ ಮಾತನ್ನು ನೀವು ಕೇಳಿರುತ್ತೀರಿ. ಹಾಗೆಯೇ ಈ ಕೋತಿಗಳು ಯಾವುದೇ ಹಣ್ಣು ಹಂಪಲನ್ನು ತಿನ್ನುವುದಕ್ಕೆ ಮುಂಚೆ ತಮ್ಮ ಪೃಷ್ಠಕ್ಕೆ (ಹಿಂಭಾಗಕ್ಕೆ) ಮುಟ್ಟಿಸಿ ನೋಡಿಕೊಳ್ಳುತ್ತವೆ.
ಅದಕ್ಕೊಂದು ಕಾರಣವಿದೆ: ಹಿಂದೆ ಒಮ್ಮೆ ಒಂದು ಕೋತಿ ದೊಡ್ಡ ಮಾವಿನಕಾಯಿ ಗೇರು/ಗೊರಟೆಯನ್ನು ಅಗಿದು ಅಗಿದು ನುಂಗಿಬಿಟ್ಟಿತಂತೆ! ನುಂಗಲು ಏನೋ ನುಂಗಿತು, ಆದರೆ ಆ ಗೊರಟೆ ಹೊಟ್ಟೆಯಲ್ಲಿ ಕರಗುತ್ತದೆಯೇ, ಹಾಗಾಗಿ ಅದು ಹೊಟ್ಟೆಯಿಂದ ಹೊರಗೆ ಬರಲೇ ಇಲ್ಲ. ಅದಕ್ಕಾಗಿ ಈಗ ಕೋತಿಗಳು ಅಳತೆ ನೋಡಿಕೊಳ್ಳುತ್ತವೆ, ತಮ್ಮ ಹಿಂಭಾಗದ ತೂತಿಗೆ ಅದು ಹಿಡಿಯುತ್ತದೋಇಲ್ಲವೋ ಎಂದು ಅಳೆಯಲು! "ಮಂಗನ ಕೈಗೆ ಮಾಣಿಕ್ಯ ಕೊಟ್ಟಂತೆ" ಎಂಬ ಗಾದೆಯೂ ಇದೇ ರೀತಿಯದ್ದು. ಮಂಗ ಮಾಣಿಕ್ಯವನ್ನು ತೆಗೆದುಕೊಂಡುಹಿಂಭಾಗಕ್ಕೆ ಇಟ್ಟುಕೊಂಡಿತಂತೆ. ಅದನ್ನು ಮೂಸಿ ನೋಡಿತು, ಯಾವುದೇ ವಾಸನೆ ಬರಲಿಲ್ಲ, ತಿನ್ನಲು ರುಚಿಯೂ ಇರಲಿಲ್ಲ, ಕೊನೆಗೆ ಅಲ್ಲಿಟ್ಟುಕೊಂಡಿತಂತೆ 'ಆಮೇಲೆ ನುಂಗವ ಎಂದು!

ಹೀಗಿರುವಾಗ ಆ ಕೋತಿಗಳಲ್ಲಿ ಒಂದು, ಮರದಲ್ಲಿ ಹೊಡೆದಿದ್ದ ಕೀಲನ್ನು ನೋಡಿತು. ಮೊದಲು ಎಳೆಯಲು ನೋಡಿತು, ಬರಲಿಲ್ಲ. ನಂತರ ಆ ಕೀಲನ್ನು ಎರಡೂ ಬದಿಯಲ್ಲಿ ಮರದ ಸೀಳಿನ ಮೇಲೆ ತನ್ನ ಕಾಲುಗಳನ್ನು ಇಟ್ಟು ಕುಳಿತು, ಕೀಲನ್ನು ಅಲುಗಾಡಿಸಲು ಶುರು ಮಾಡಿತು. ಅದರ ಎರಡು ವೃಷಣಗಳು ಮರದ ಸೀಳಿನ ಒಳಗೆ ಹೋದವು. ಕೋತಿ ತನ್ನ ಪಟ್ಟು ಬಿಡದೆ, ಮುಂಚೂಣಿಯಲ್ಲಿ ಹಿಂದೆ-ಮುಂದೆ ಆಡಿಸಿ ಆಡಿಸಿ ಕೊನೆಗೆ ಕೀಲನ್ನು ಕಳಚಿ ಹೊರಗೆ ತೆಗೆಯಿತು! ಅಷ್ಟೇ, ಕೀಲು ಕೈಗೆ ಬಂದ ತಕ್ಷಣ ಸೀಳಿದ್ದ ಮರ ಚಕ್ಕನೆ ಒಂದಾಯಿತು. ಕೋತಿ ಗಟ್ಟಿಯಾಗಿ ಚೀರಿ, ಬಾಯಿ ತೆರೆದ ಹಾಗೆಯೇ ಕಣ್ಣಿನಲ್ಲೇ ಪ್ರಾಣ ಬಿಟ್ಟಿತು. ಅದರ ಬೀಜಗಳೆರಡೂ(ವೃಷಣಗಳು) ಮರದ ಮಧ್ಯೆ ಸಿಕ್ಕಿ ನಜ್ಜುಗುಜ್ಜಾದವು.

ಇದು ಪಂಚತಂತ್ರದ ಕಥೆ.